**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 451/2022**

| | | | |
|---|---|---|---|
| **ಹೆಸರು** | : | **ನರಸಮ್ಮ** | **ಚಾ.ಸಾ. 4** |
| **ಗಂಡನ ಹೆಸರು** | : | **ಶರಣಪ್ಪ** | **ಪ್ರಾ.ಸಾ. 1** |
| **ವಯಸ್ಸು** | : | **45 ವರ್ಷ** | **ದಿನಾಂಕಃ 04-09-2024** |
| **ಉದ್ಯೋಗ** | : | **ಒಕ್ಕಲುತನ** | |
| **ವಾಸಸ್ಥಳ** | : | **ಐನಾಪುರ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಚಾಸಾ 1, 2, 5 ರಿಂದ 9 ರವರು ಹಾಗೂ ಆರೋಪಿತರು ನಮ್ಮ ಗ್ರಾಮದವರು.

ಈಗ 3 ವರ್ಷಗಳ ಹಿಂದೆ ಬೆಳಿಗ್ಗೆ ಸಮಯಕ್ಕೆ ನಾನು ಶೌಚಾಲಯಕ್ಕೆಂದು ನಾನು, ಚಾಸಾ 1, ಚಾಸಾ 2 ಚಾಸಾ 5, ಚಾಸಾ 3, ಚಾಸಾ 8, ಚಾಸಾ 7, ಚಾಸಾ 9 ಹಾಗೂ ಚಾಸಾ 6 ರವರು ಹೋದಾಗ ನ್ಯಾಯಾಲಯದ ಮುಂದೆ ಇರುವ ಆರೋಪಿತರ ಮನೆ ನಾವು ಶೌಚಾಲಯಕ್ಕೆ ಹೋಗುವ ಸ್ಥಳದಲ್ಲಿ ಇದೆ. ಆರೋಪಿತರು ತಮ್ಮ ಮನೆಯ ಮೇಲೆ ತಮ್ಮ ಮನೆ ಇದ್ದ ಕಾರಣ ಹೋಗುತ್ತಿದ್ದರು. ನನಗಾಗಲೀ ಚಾಸಾ 1 ರವರಿಗಾಗಲೀ ಆರೋಪಿತರು ಯಾವುದೇ ಹಾನಿ ಮಾಡಿಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ಹೇಳಿಕೆಗೆ ಈ ಸಾಕ್ಷಿ ಸಂಪೂರ್ಣ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ದಿನಾಂಕ 05-10-2021 ರಂದು ಬೆಳಿಗ್ಗೆ 9 ಗಂಟೆ ಸುಮಾರಿಗೆ ನಾನು ಮತು ಚಾಸಾ 1 ರವರು ಶೌಚಾಲಯಕ್ಕೆಂದು ಆರೋಪಿತರ ಮನೆಯ ಹಿಂದೆ ಹೋದಾಗ ಆರೋಪಿತರು ಕೆಟ್ಟ ದೃಷ್ಟಿಯಿಂದ ಇಣುಕಿ ನೋಡುತ್ತಿದ್ದರು ಎಂದರೆ ಸರಿ. ಆಗ ಚಾಸಾ 2, ಚಾಸಾ 5 ರಿಂದ 9 ರವರು ಸಹ ಇದ್ದರು ಎಂದರೆ ಸರಿ. ಈ ರೀತಿ ಆರೋಪಿತರು ನಮಗೆ ತೊಂದರೆ ಉಂಟು ಮಾಡುತ್ತಿದ್ದರು ಎಂದರೆ ಸರಿ. ಇದರ ಬಗ್ಗೆ ಚಾಸಾ 1 ರವರು ದೂರು ನೀಡಿದ್ದಾರೆ ಎಂದರೆ ಸರಿ. ಆದ್ದರಿಂದ ನಾನು ಘಟನೆಯ ಬಗ್ಗೆ ಪೋಲಿಸರೆಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ NHR ವಕೀಲರಿಂದಃ**

ನನಗೆ ತಾರೀಖು, ತಿಂಗಳು ವರ್ಷ ಗೊತ್ತಾಗುವುದಿಲ್ಲ. ಯಾವ ದಿನಾಂಕದಂದು ಘಟನೇಯಾಗಿದೆ ಎಂದು ನನಗೆ ಗೊತ್ತಾಗುವುದಿಲ್ಲ. ನಮ್ಮ ಮನೆಯಲ್ಲಿ ಶೌಚಾಲಯವಿಲ್ಲ. ಸಾಕ್ಷಿ ಮುಂದುವರೆದು ಶೌಚಾಲಯ ಇಲ್ಲದೇ ಇರುವ ಕಾರಣ ಅಲ್ಲಿ ಹೋಗುತ್ತೇವೆ ಎಂದು ನುಡಿಯುತ್ತಾರೆ.

ಮಾಣಿಕ ರೆಡ್ಡಿ ತಂದೆ ಭೀಮರೆಡ್ಡಿ ನಮ್ಮ ಪಕ್ಕದ ಮನೆಯವರು. ಮಾಣಿಕ ರೆಡ್ಡಿ ಮತ್ತು ಆರೋಪಿತರ ಮದ್ಯೆ ಆಸ್ತಿ ಸಂಬಂಧ ಜಗಳ ಆಗಿತ್ತು ಮತ್ತು ವಿಷಯ ಪೋಲಿಸ ಠಾಣೆಯ ವರೆಗೆ ಹೋಗಿತ್ತು ಎಂದರೆ ನನಗೆ ಗೊತ್ತಿಲ್ಲ. ಮಾಣಿಕ ರೆಡಿ ರವರ ಮೊಮ್ಮಗ ಚಾಸಾ 1 ರವರ ಗಂಡ ಎಂದರೆ ಸರಿ. ಚಾಸಾ 8 ರವರು ಮಾಣಿಕ ರೆಡ್ಡಿ ರವರ ಸೊಸೆ ಎಂದರೆ ಸರಿ. ಚಾಸಾ 8 ರವರ ಗಂಡ ಹಾಗೂ ಆರೋಪಿತರ ಮದ್ಯೆ ಜಗಳವಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ನಮ್ಮ ಹಾಗೂ ಚಾಸಾ 8 ರವರ ಮದ್ಯೆ ಸಂಬಂಧ ಸರಿ ಇದೆ ಎಂದರೆ ಸರಿ. 1ನೇ ಆರೋಪಿಯ ಮನೆ ಪಕ್ಕದಲಿ ನಾರಾಯಣ ರೆಡ್ಡಿ ರವರ ಮನೆ ಇದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಮಾಣಿಕ ರೆಡ್ಡಿ ರವರ ಮಗ ನಾಗರೆಡ್ಡಿ ಎಂದು ನುಡಿಯುತ್ತಾರೆ. 1ನೇ ಆರೋಪಿಯ ಮನೆ ಪಕ್ಕದಲಿ ನಾರಾಯಣ ರೆಡ್ಡಿ ರವರ ಮನೆಯಿದ್ದು ನಂತರ ನಾಲಾ ಇದೆ ಎಂದರೆ ಸರಿ. 1ನೇ ಆರೋಪಿಯ ಮನೆಯಿಂದ ನಾಲಾ 200 ಅಡಿ ದೂರ ಇದೆ ಎಂದರೆ ಸಾಕ್ಷಿ ನಾಲಾ ಮತ್ತು 1ನೇ ಆರೋಪಿಯ ಮನೆಅಕ್ಕಪಕ್ಕದಲ್ಲಿ ಇದೆ ಎಂದು ನುಡಿಯುತ್ತಾರೆ.

1ನೇ ಆರೋಪಿ ಮೊದಲು ಮಿಲ್ಟ್ರಿಯಲ್ಲಿದ್ದು ಈಗ ನಿವೃತ್ತಿ ಹೊಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1ನೇ ಆರೋಪಿಯ ಹೆಸರಿನಲ್ಲಿ ಮನ್ನಾ ಖೆಯೆಳ್ಳಿ ಮತ್ತು ಚಿಟಗುಪ್ಪಾದಲ್ಲಿ ಹಿರೋಹೋಂಡಾ ಶೋರೂಂಗಳು ಇವೆ ಎಂದರೆ ನನಗೆ ಗೊತ್ತಿಲ್ಲ. ಚಾಸಾ 1 ರವರು ಏನೆಂದು ಪ್ರಕರಣ ಸಲಿಸಿದ್ದಾರೆಂದು ನನಗೆ ಗೊತ್ತಿಲ್ಲ. ಪೋಲಿಸರು ನಮ್ಮ ಗ್ರಾಮಕ್ಕೆ ಬಂದಾಗ ಹೇಳಿಕೆಯನ್ನು ನೀಡಿದ್ದೇನೆ. ಹೇಳಿಕೆ ನೀಡಿದಾಗ ಸಮಯ ಎಷ್ಟು ಆಗಿತ್ತು ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಬೆಳಿಗ್ಗೆ ಸಮಯಕ್ಕೆ ಬಂದಿದ್ದರು ಎಂದು ನುಡಿಯುತ್ತಾರೆ. ನಾನು ಹೇಳಿಕೆ ನೀಡುವ ಸಮಯಕ್ಕೆ ನಾನು, ಚಾಸಾ 3 ಮತ್ತು ಚಾಸಾ 1 ರವರು ಇದೆವು. ನಂತರ ಉಳಿದವರು ಬಂದಿದ್ದಾರೆ ಎಂದು ನುಡಿಯುತ್ತಾರೆ. ಹೇಳಿಕೆಯನ್ನು ಪೋಲಿಸರು ನನಗೆ ಓದಿ ಹೇಳಿರುವ ಬಗ್ಗೆ ನೆನಪಿಲ್ಲ. ಏನು ಹೇಳಿಕೆ ನೀಡಿದ್ದೀರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ನಮಗೆ ಶೌಚಾಲಯಕ್ಕೆ ಹೋಗಲು ಸ್ಥಳವಿಲ್ಲ ಆದ್ದರಿಂದ ಸ್ಥಳ ಕೊಡಿಸಿ ಎಂದು ಕೇಳಿದ್ದೇವೆ ಎಂದು ನುಡಿಯುತ್ತಾರೆ.

ಸಾಮಾನ್ಯವಾಗಿ ತಮ್ಮ ಮನೆ ಎಂದರೆ ಅವರು ಅವರ ಮನೆಯ ಮೇಲ ಹೋಗುತ್ತಾರೆ ಎಂದರೆ ಸಾಕ್ಷಿ ಕೆಲಸ ಇದ್ದರೆ ಮನೆಯಿ ಮೇಲೆ ಮಹಿಳೆಯರು ಹೋಗಬೇಕು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ನಾವು ಶೌಚಾಲಯಕ್ಕೆ ಹೋದಾಗಲೇ ಯಾವ ಕಾರಣಕ್ಕಾಗಿ ಬರಬೇಕಿತ್ತು ಎಂದು ಮರುಪ್ರಶ್ನೆ ಮಾಡುತ್ತಾರೆ. ಈ ರೀತಿ ಮನೆಯ ಮೇಲೆ ಮಹಿಳೆಯರೇ ಹೋಗಬೆಕು ಎಂದು ನಿಮ್ಮ ಊರಿನಲ್ಲಿ ನಿಯಮ ಮಾಡಿದ್ದೀರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ನಮಗೆ ಹೋಗಲು ಬೇರೆ ಸ್ಥಳವಿಲ್ಲ ಎಂದು ನುಡಿಯುತ್ತಾರೆ. ಈ ರೀತಿ ಪಕ್ಕದಲ್ಲಿ

ಶೌಚಾಲಯಕ್ಕೆ ಹೋಗುವ ಕಾರಣ ಮನೆಯ ಮೇಲೆ ಹೋಗಬಾರದು ಎಂದು ಪಂಚಾಯತಿ ಮಾಡಿದ್ದೀರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಪಂಚಾಯತಿ ಆಗಿದೆ ಎಂದು ನುಡಿಯುತ್ತಾರೆ. ಮಾಣಿಕ ರೆಡ್ಡಿ ಮತ್ತು ಆರೋಪಿತರ ಮಧ್ಯೆ ಜಗಳವಿದ್ದ ಕಾರಣ ಮತ್ತು ನಾನು ಪಕ್ಕದ ಮನೆಯವಳಿದ್ದ ಕಾರಣ ಚಾಸಾ 1 ರವರ ಮಾತುಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕಃ 05-10-2021 ರಂದು ಆರೋಪಿತರು ಮನೆಯಲ್ಲಿ ಇರಲಿಲ್ಲ ಮತ್ತು ಬೆಳಿಗ್ಗೆ ಆರೋಪಿತರು ತಮ್ಮ ಶೋರೂಂಗಳಿಗೆ ಹೋಗಿರುತ್ತಾರೆ ಎಂದರೆ ಸರಿಯಲ್ಲ.

ಆರೋಪಿತರ ಮನೆಯ ಹಿಂದೆ ನಾಲಾ ಇದ್ದು ಅದರ ಹಿಂದೆ ಗಿಡಗಂಟಿಗಳು ಬಹಳಷ್ಟು ಇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಈಗ ಆಗಿವೆ ಎಂದು ನುಡಿಯುತ್ತಾರೆ.

ಸಾಮಾನ್ಯವಾಗಿ ಯಾವುದೇ ಒಬ್ಬ ವ್ಯಕ್ತಿ ಬೆಳಿಗ್ಗೆ ಸಮಯಕ್ಕೆ ಎಲ್ಲಾ ಕೆಲಸ ಮುಗಿಸುವ ಮೊದಲು ಬೆಳಿಗ್ಗೆ 4-5 ಗಂಟೆಯ ಒಳಗೆ ಶೌಚಾಲಯಕ್ಕೆ ಹೋಗುತ್ತಾರೆ ಎಂದರೆ ಸರಿ. ನಾವೆಲ್ಲರೂ ಸಹ ಬೆಳಿಗ್ಗೆ 4-5 ಗಂಟೆಗೆ ಶೌಚಾಲಯಕ್ಕೆ ಹೋಗುತ್ತೇವೆ ಎಂದರೆ ಸಾಕ್ಷಿ ತಡಮಾಡಿ 9 ರ ನಂತರ ಹೋಗುತ್ತೇವೆ ಎಂದು ನುಡಿಯುತ್ತಾರೆ. ಆ ದಿನ ಎಷ್ಟು ಗಂಟೆಗೆ ಶೌಚಾಲಯಕ್ಕೆ ಹೋಗಿದ್ದೀರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ನನಗೆ ಸಮಯ ಅರ್ಥವಾಗುವುದಿಲ್ಲ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ನಾವು ಶೌಚಾಲಯ ಮುಗಿಸಿಕೊಂಡು ಒಕ್ಕಲುತನ ಕೆಲಸಕ್ಕೆ ಹೋಗುತೇವೆ ಎಂದರೆ ಸರಿ. ಆದ್ದರಿಂದ ಬೆಳಿಗ್ಗೆ 5 ರ ನಂತರ ಶೌಚಾಲಯಕ್ಕೆ ಹೋಗುತ್ತೇವೆ ಎಂದರೆ ಸಾಕ್ಷಿ ಬೆಳಿಗ್ಗೆ 7 ನಂತರ ಹೋಗುತ್ತೇವೆ ಎಂದು ನುಡಿಯುತ್ತಾರೆ. ಪೋಲಿಸರಿಗೆ ಇದೇ ಸಮಯಕ್ಕೆ ಶೌಚಾಲಯಕ್ಕೆ ಹೋಗಿರುವ ಬಗ್ಗೆ ಬರೆಸಿದ್ದೀರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಪೋಲಿಸರ ಮುಂದೆ ಘಟನೆ, ದಿನಾಂಕ ಮತ್ತು ಸಮಯ ಹೇಳಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮಾಣಿಕರೆಡ್ಡಿ ರವರು ಆರೋಪಿತರ ವಿರುದ್ದ ಸೇಡು ತೀರಿಸಿಕೊಳ್ಳಲು ನಮಗೆ ಎಲ್ಲಾರಿಗೆ ತಯಾರಿಸಿ ಸುಳ್ಳು ಸಾಕ್ಷಿ ಹೇಳಲು ನ್ಯಾಯಾಲಯಕ್ಕೆ ಕಳುಹಿಸಿದ್ದಾರೆ ಎಂದರೆ ಸರಿಯಲ್ಲ.

ಈ ದಿನ ನ್ಯಾಯಾಲಯಕ್ಕೆ ಬರುವ ಬಸ್ಸಿ ನ ಖರ್ಚು ಚಾಸಾ 8 ರವರು ನೀಡಿರುತಾರೆ ಎಂದರೆ ಸಾಕ್ಷಿ ನಮ್ಮ ಖರ್ಚು ನಾವು ನೋಡಿಕೊಂಡಿದ್ದೇವೆ ಎಂದು ನುಡಿಯುತ್ತಾರೆ. ಆರೋಪಿತರು ಯಾವುದೇ ಕೆಟ್ಟ ಕೆಲಸ ಮಾಡದೇ ಇದ್ದರೂ ಸಹ ಅವರ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿತರು ಯಾವುದೇ ಕೆಟ್ಟ ದೃಷ್ಟಿಯಿಂದ ನೋಡುವುದಿಲ್ಲ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ, ಆದರೆ ಅವರು ತಮ್ಮ ಮನೆಯ ಮೇಲೆ ಹೋಗುತಾರೆ ಎಂದು ನುಡಿಯುತ್ತಾರೆ. ನನ್ನ ಮುಖ್ಯವಿಚಾರಣೆಯಲ್ಲಿರುವ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**